ನಂಬದಾದ. ಅದೆಲ್ಲ ಆತನಿಗೆ ಕನಸಿನಂತೆನಿಸಿತು. ಪುಸ್ತಕಗಳು ಪೋಲಂಡ್ ದೇಶದ ಭಾಷೆಯಲ್ಲಿದ್ದವು. ಅದೇನೆಂದುಕೊಳ್ಳಬೇಕು? ಯಾರು ಆ ಪುಸ್ತಕ ಕಳಿಸಿರಬಹುದು? ಮೊದಮೊದಲು ಅವನಿಗೆ ಏನು ಸ್ಪಷ್ಟವಾಗಿ ಹೊಳೆಯಲಿಲ್ಲ. ದೀಪಗೃಹದ ಸಂಚಾಲಕ ಸೇವೆ ಆರಂಭಿಸಿದ ಸಂದರ್ಭದಲ್ಲಿ ಆತ ತನ್ನ ಮೇಲಾಧಿಕಾರಿಯ ಬಳಿಯಿಂದ ತಂದ ಹೆರಾಲ್ಡ್ ಪತ್ರಿಕೆಯಲ್ಲಿ 'ನ್ಯೂಯಾರ್ಕನಲ್ಲಿ ಪೋಲಿಶ್ ಸಂಸ್ಥೆಯೊಂದನ್ನು ಸ್ಥಾಪಿಸಲಾಗುತ್ತಿದೆ' ಎಂಬ ಸುದ್ದಿ ಪ್ರಕಟವಾಗಿತ್ತು. ಅದನ್ನು ಓದಿದ ತಕ್ಷಣವೇ ಆತ ತನ್ನ ಸಂಬಳದ ಅರ್ಧದಷ್ಟು ಹಣವನ್ನು ಆ ಸಂಸ್ಥೆಗೆ ಕಳಿಸಿಕೊಟ್ಟಿದ್ದ. ಈ ದ್ವೀಪದಲ್ಲಿ ಅಷ್ಟೊಂದು ಹಣ ಇಟ್ಟುಕೊಂಡು ಮಾಡುವುದಾದರೂ ಏನಿದೆ? ಎಂದು ಹಾಗೆ ಮಾಡಿದ್ದ. ಆ ಸಂಸ್ಥೆ ಧನ್ಯವಾದಗಳೊಂದಿಗೆ ಆತನಿಗೆ ಪುಸ್ತಕಗಳನ್ನು ಕಳಿಸಿಕೊಟ್ಟಿತ್ತು. ಸಹಜವಾಗಿಯೇ ಪುಸ್ತಕಗಳು ಅಲ್ಲಿಗೆ ಬಂದಿದ್ದವು. ಆದರೆ, ಆ ಕ್ಷಣ ಆ ವೃದ್ಧನಿಗೆ ತನ್ನ ಭಾವನೆಗಳನ್ನು ಅದುಮಿಟ್ಟುಕೊಳ್ಳಲಾಗಲಿಲ್ಲ. ಆ್ಯಸ್ಪಿನ್‌ವಾಲ್‌ದಲ್ಲಿ ಪೋಲಿಶ್ ಭಾಷೆಯ ಪುಸ್ತಕಗಳೆ! ಅದೂ ಆತನ ಗೋಪುರದಲ್ಲಿ! ಅಂಥ ಆ ಏಕಾಂತದ ಮಧ್ಯದಲ್ಲಿ!—ಅದೆಲ್ಲವೂ ಆತನಿಗೆ ಅಸಹಜವಾಗಿತ್ತು, ಹಳೆಯ ಕಾಲದ ಒಂದು ಉಸಿರಾಗಿತ್ತು, ಒಂದು ಪವಾಡವಾಗಿತ್ತು. ಅಂದಿನ ಆ ರಾತ್ರಿ ಆ ನಾವಿಕರಿಗೆ ಏನೊ ಒಂದು ತಮ್ಮ ಹೆಸರು ಹಿಡಿದು ಕರೆದ ಹಾಗೆ, ಇಂದು ಅವನ ಹೆಸರು ಹಿಡಿದು ಯಾರೋ ಕೂಗಿ ಕರೆದಂತೆನಿಸಿತು. ತನಗೆ ಅತ್ಯಂತ ಪ್ರಿಯವಾದ ಆ ದನಿ, ಮರತೇ ಹೋಗಿದ್ದ ಆ ದನಿ! ಆತ ಒಂದು ಕ್ಷಣ ಕಣ್ಣು ಮುಚ್ಚಿಕೊಂಡು ಕುಳಿತ, ನಂತರ ಅವುಗಳನ್ನು ತೆರೆದಾಗ ಕವಿದಿದ್ದ ಕನಸು ಕರಗಿ ಹೋಗಿತ್ತು. ಕತ್ತರಿಸಿ ತೆರೆದಿದ್ದ ಪ್ಯಾಕೇಜ್ ಅವನೆದುರು ಅಲ್ಲೇ ಕೆಳಗೆ ಬಿದ್ದಿತ್ತು. ಇಳಿಹೊತ್ತಿನ ಬಿಸಿಲ ಬೆಳಕಿನಲ್ಲಿ ಅದು ಸ್ಪಷ್ಟವಾಗಿ ಕಾಣುತ್ತಿತ್ತು. ಆ ಪ್ಯಾಕೇಜ್ ಮೇಲೆ ತೆರೆದ ಪುಸ್ತಕವಿತ್ತು. ಆ ವೃದ್ಧ ಆ ಪುಸ್ತಕದೆಡೆ ಕೈಚಾಚಿದ. ಅಲ್ಲಿ ತುಂಬಿಕೊಂಡಿದ್ದ ಮೌನದಲ್ಲಿ ಆತ ತನ್ನ ಹೃದಯ ಬಡಿತದ ಸದ್ದನ್ನು ಕೇಳಿಸಿಕೊಂಡ. ಆತ ಅದನ್ನು ತೀಕ್ಷ್ಣವಾಗಿ ನೋಡಿದ. ಅದು ಕವಿತೆಯಾಗಿತ್ತು. ಪುಸ್ತಕದ ಮುಖ ಪುಟದ ಮೇಲೆ ದಪ್ಪ ಅಕ್ಷರಗಳಿಂದ ತಲೆಬರಹ ಬರೆಯಲಾಗಿತ್ತು. ಅದರ ಕೆಳಗೆ ಲೇಖಕನ ಹೆಸರಿತ್ತು. ಆ ಹೆಸರು ಸ್ಕಾವಿನ್‌ಸ್ಕಿಗೆ ಅಪರಿಚಿತವೇನಾಗಿರಲಿಲ್ಲ. ಪೋಲಂಡ್‌ನ ಮಹಾಕವಿ ಮಿಕೀವಿಕ್ಜ್‌ನ ಕೃತಿ ಅದಾಗಿತ್ತು. ಅವನ ಅನೇಕ ಕೃತಿಗಳನ್ನು 1830ರಲ್ಲಿ ಪ್ಯಾರೀಸ್‌ನಲ್ಲಿದ್ದಾಗ ಆತ ಓದಿದ್ದ. ಅನಂತರ ಆತ ಅಲ್ಜೀರ್ಸ್ ಹಾಗೂ ಸ್ಪೇನ ದೇಶಗಳಿಗೆ ದಂಡಯಾತ್ರೆಗೆ ಹೋದಾಗ ತನ್ನ ದೇಶದ ಜನರಿಂದ ಆ ಮಹಾಕವಿಯ ಪ್ರಸಿದ್ಧಿಯ ಬಗ್ಗೆ ಕೇಳಿ ತಿಳಿದಿದ್ದ. ಆದರೆ ಆ ವೇಳೆಯಲ್ಲಿ ಆತ ಬಂದೂಕಿಗೆ ಅದೆಷ್ಟು ಹೊಂದಿಕೊಂಡಿದ್ದನೆಂದರೆ, ಒಂದು ಪುಸ್ತಕವನ್ನು ಸಹ ಆತ ಕೈಗೆತ್ತಿಕೊಂಡಿರಲಿಲ್ಲ. 1849ರಲ್ಲಿ ಆತ ಅಮೆರಿಕೆಗೆ ಹೋಗಿದ್ದ. ಅಲ್ಲಿರುವಷ್ಟು ಕಾಲ ತನ್ನ ಸಾಹಸಮಯ ಜೀವನದಲ್ಲಿ ಒಬ್ಬನೇ ಒಬ್ಬ ಪೋಲಂಡ್ ಪ್ರಜೆಯನ್ನು ಕೂಡ ಆತ ಭೆಟ್ಟಿಯಾಗಿರಲಿಲ್ಲ. ಅದರಂತೆ ಒಂದೇ ಒಂದು ಪೋಲಿಶ್ ಭಾಷೆಯ ಪುಸ್ತಕವನ್ನು ಕೂಡ ಮುಟ್ಟಿರಲಿಲ್ಲ. ಆದ್ದರಿಂದ ಅತ್ಯಂತ ಕುತೂಹಲದಿಂದ ಹಾಗೂ ಹೃದಯ ಮಿಡಿತದ ಉತ್ಸುಕತೆಯಿಂದ ಆತ ಅದರ ಮೊದಲ ಪುಟವನ್ನು ತಿರುವಿದ. ಆ ಸ್ಥಳದ ಏಕಾಂತತೆಯಲ್ಲಿ ಏನೋ ಒಂದು ಧಾರ್ಮಿಕ ಆಚರಣೆ ನಡೆಯಲಿದೆ ಎಂಬಂತೆ ಆತನಿಗೆನಿಸಿತು. ನಿಜಕ್ಕೂ ಅತ್ಯಂತ ಪ್ರಶಾಂತ ಹಾಗೂ ದಿವ್ಯ ಮೌನದ ಕ್ಷಣವದು! ಆ್ಯಸ್ಪಿನ್‌ವಾಲ್‌ದ ಗಡಿಯಾರಗಳಲ್ಲಿ ಸಂಜೆಯ ಐದು ಗಂಟೆಯ ಸಮಯ ಢಣಢಣಿಸುತ್ತಿತ್ತು. ಎಲ್ಲೆಲ್ಲೂ ನಿರಭ್ರ ಆಕಾಶ—ಒಂದೇ ಒಂದು ತುಂಡು ಮೋಡ ಕೂಡ ಆಕಾಶವನ್ನು ಕಪ್ಪಾಗಿಸಿರಲಿಲ್ಲ. ಕೆಲವು ಕಡಲು ಕೋಳಿಗಳು ಮಾತ್ರ ಗಾಳಿಯಲ್ಲಿ ತೇಲುತ್ತಿದ್ದವು. ಜೋಗುಳ ಹಾಡಿ ತೂಗಿ ಸಮುದ್ರವನ್ನು